# ಕಲರ್ಸ್ ಕನ್ನಡ ಸಿನಿಮಾದ ಹೊಸ ಶೋ

# ‘ಮಜಾ ಕೆಫೆ’

## -ಚಂದನವನದ ತಾರೆಯರೊಂದಿಗೆ ಹರಟೆ

**–ಸೆ. 4 ರಿಂದ ಸೋಮವಾರ – ಶುಕ್ರವಾರ ರಾತ್ರಿ 10 ಗಂಟೆಗೆ ಪ್ರಸಾರ**

**–ಶನಿವಾರ, ಭಾನುವಾರ ಮಧ್ಯಾಹ್ನ 12 ರಿಂದ ಸ್ಪೆಷಲ್ ಎಪಿಸೋಡ್**



**ಕಲರ್ಸ್ ಕನ್ನಡ ಸಿನಿಮಾ**–ಸಿನಿ ಪ್ರಿಯರಿಗೆ ಸದಾ ಮನರಂಜನೆ ನೀಡುತ್ತಿರುವ ಮತ್ತು ವೈವಿಧ್ಯಮಯ ಹಾಗೂ ವಿಶಿಷ್ಟ ಕಾರ್ಯಕ್ರಮಗಳಿಗೆ ಹೆಸರಾದ ಚಾನೆಲ್. ಹೋಮ್ ಸಿನಿಮ್ಯಾಟಿಕ್‌ನಲ್ಲಿ ತಾಜಾತನವನ್ನು ತಂದಿರುವ ಫ್ಯಾಮಿಲಿ ಎಂಟರ್‌ಟೈನಿಂಗ್ ಮೂವೀ ಚಾನೆಲ್. ಇದೀಗ **‘ಮಜಾ ಕೆಫೆ’** ಎಂಬ ವಿನೂತನ ಮನರಂಜನಾ ಕಾರ್ಯಕ್ರಮವೊಂದನ್ನು ವೀಕ್ಷಕರಿಗಾಗಿ ಸಿದ್ಧಪಡಿಸಿದೆ.

ಸ್ಯಾಂಡಲ್‌ವುಡ್ ತಾರೆಯರ ಸೂಪರ್‌ಹಿಟ್ ಸಿನಿಮಾಗಳಿಂದ ಹಿಡಿದು ಆ್ಯಕ್ಷನ್, ಥ್ರಿಲ್ಲರ್, ರೊಮ್ಯಾಂಟಿಕ್, ಕಾಮಿಡಿ, ಎಮೋಷನಲ್ ಹೀಗೆ ಹಲವು ಬಗೆಯ ಸಿನಿಮಾಗಳನ್ನು ದಿನದ 24 ಗಂಟೆಯೂ ಪ್ರೇಕ್ಷಕರಿಗೆ ಉಣಬಡಿಸುವ ಕಲರ್ಸ್ ಕನ್ನಡ ಸಿನಿಮಾದ ಹೊಸ ಶೋ ಮಜಾ ಕೆಫೆ.

**ಪ್ರಸ್ತುತಿ: ಸುಧಾ ಬ್ರ್ಯಾಂಡ್ ಸ್ಪಾಟ್**

### ಮಜಾ ಕೆಫೆ ವಿಶೇಷವೇನು?

ಗೆಳೆಯರ ಜತೆ ಕೂತು ಕಾಫಿ ಹೀರುತ್ತಾ, ಹರಟುತ್ತಾ ಸಮಯ ಕಳೆಯುವುದು ಸಾಮಾನ್ಯವಾಗಿ ಕೆಫೆಗಳಲ್ಲಿ ಕಂಡುಬರುವ ದೃಶ್ಯ. ಇದನ್ನೇ ಮೂಲವಾಗಿರಿಸಿಕೊಂಡು ಕಲರ್ಸ್ ಕನ್ನಡ ಸಿನಿಮಾ ಶುರು ಮಾಡಿದ ನೂತನ ಶೋ ಇದು. ಸ್ಯಾಂಡಲ್‌ವುಡ್ ತಾರೆಯರು, ಗಾಯಕರು, ಬರಹಗಾರರು, ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಯೂಟ್ಯೂಬ್‌ನ ಪ್ರಸಿದ್ಧ ಇನ್‌ಫ್ಲುಯೆನ್ಸರ್‌ಗಳು ಇಲ್ಲಿಗೆ ಬಂದು ತಮ್ಮ ಬಾಲ್ಯ, ಜೀವನಶೈಲಿ ಹಾಗೂ ಮತ್ತಿತರ ವಿಷಯಗಳ ಬಗ್ಗೆ ಹರಟುತ್ತಾರೆ. ಆ್ಯಂಕರ್ ಜೊತೆ ಮಜ, ಮಜವಾದ ಆಟಗಳನ್ನು ಆಡುತ್ತಾರೆ.

ಮಜಾ ಕೆಫೆಯ ಮೊದಲ ಅತಿಥಿಯಾಗಿ ರೆಬೆಲ್ ಸ್ಟಾರ್ ಅಂಬರೀಷ್ ಅವರ ಸುಪುತ್ರ ಯಂಗ್ ರೆಬೆಲ್‌ಸ್ಟಾರ್ ಅಭಿಷೇಕ್ ಅಂಬರೀಷ್ ಭಾಗವಹಿಸಲಿದ್ದಾರೆ. ನಂತರದ ಶೋನಲ್ಲಿ ನಟ–ನಿರ್ದೇಶಕ, ನಿರ್ಮಾಪಕ ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ತನ್ನ ಹೊಸ ಚಿತ್ರದ ನಾಯಕಿ ರುಕ್ಮಿಣಿ ವಸಂತ್ ಮತ್ತು ನಿರ್ದೇಶಕ ಹೇಮಂತ್ ರಾವ್ ಜೊತೆಗೆ ಕೆಫೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇನ್ನೂ **‘ನನ್ನಮ್ಮ ಸೂಪರ್ ಸ್ಟಾರ್’** ಮತ್ತು **‘ಗಿಚ್ಚಿ ಗಿಲಿಗಿಲಿ’** ಶೋ ಮೂಲಕ ಮನೆ ಮಾತಾಗಿರುವ ಜಾಹ್ನವಿ ಈ ಕಾರ್ಯಕ್ರಮದ ನಿರೂಪಕಿ.

### ಸೆಪ್ಟೆಂಬರ್ 4ರಿಂದ ಪ್ರಸಾರ:

**ಸೆಪ್ಟೆಂಬರ್ 4ರಂದು** ಕಲರ್ಸ್ ಕನ್ನಡ ಸಿನಿಮಾ ವಾಹಿನಿಯಲ್ಲಿ ‘ಮಜಾ ಕೆಫೆ’ ಕಾರ್ಯಕ್ರಮ **ರಾತ್ರಿ 10 ಗಂಟೆಗೆ** ಪ್ರಸಾರವಾಗಲಿದೆ. ಆ ಬಳಿಕ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ರಾತ್ರಿ 10 ಗಂಟೆಗೆ ಪ್ರಸಾರವಾಗಲಿದೆ. ಶನಿವಾರ ಮತ್ತು ಭಾನುವಾರ ಒಂದೊಂದು ಗಂಟೆಗಳ ಸ್ಪೆಷಲ್ ಎಪಿಸೋಡ್ ಆಗಿ ಮಧ್ಯಾಹ್ನ 12 ಗಂಟೆಯಿಂದ ಇದೇ ಚಾನೆಲ್‌ನಲ್ಲಿ ಮಜಾ ಕೆಫೆ ಪ್ರಸಾರವಾಗಲಿದೆ.

ಕಲರ್ಸ್ ಕನ್ನಡ ಸಿನಿಮಾ ಚಾನೆಲ್ ಚಂದನವನದ ನಿಮ್ಮ ಮೆಚ್ಚಿನ ಸಿನಿಮಾ ಸ್ಟಾರ್‌ಗಳ ಮಾತು–ಕತೆ, ಹಾಡು–ಹರಟೆಗಳನ್ನು **‘ಮಜಾ ಕೆಫೆ’** ಮೂಲಕ ನಿಮ್ಮನ್ನು ತಲುಪಲಿದೆ. ಮಜಾ ಕೆಫೆಯ ಆರಂಭದ ಎಪಿಸೋಡ್‌ಗಳ ಪ್ರೋಮೊ ಬಗ್ಗೆ ಜನರಿಂದ ಈಗಾಗಲೇ ಭಾರೀ ಪ್ರಶಂಸೆ ವ್ಯಕ್ತವಾಗಿದೆ.

